**ಕರ್ನಾಟಕ ಸರ್ಕಾರ**

**ಸಂಖ್ಯೆ: ಯೋಇ 61 ಜಿಯೋವಿ 2017**

**ಕರ್ನಾಟಕ ಸರ್ಕಾರದ ಸಚಿವಾಲಯ**
**3ನೇ ಹಂತ, 7ನೇ ಮಹಡಿ, ಬಹುಮಹಡಿ ಕಟ್ಟಡ**
**ಬೆಂಗಳೂರು, ದಿನಾಂಕ: 10/10/2017.**

**<u>ಸುತ್ತೋಲೆ</u>**

**ವಿಷಯ:** ಜಿಲ್ಲೆಯ ನವ ಪರಿವರ್ತನಾ ನಿಧಿ (District Innovative Fund) ಯಡಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನಿಗದಿಪಡಿಸಲಾದ ಮಾರ್ಗಸೂಚಿಗಳು.

*****

ಜಿಲ್ಲೆಯ ನವ ಪ್ರವರ್ತನಾ ನಿಧಿ(District Innovative Fund) ಕಾರ್ಯಕ್ರಮದಡಿ ಕಾಮಗಾರಿಗಳನ್ನು ಅನುಷ್ಠಾನಿಸಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಬೇಕಾಗಿದೆ.

1. ಗ್ರಾಮಾಂತರ ಪ್ರದೇಶದ ಸಾರ್ವಜನಿಕರಿಗೆ/ಸಮುದಾಯಕ್ಕೆ ಅವಶ್ಯಕವಾಗಿ ಬೇಕಾಗುವ ಮೂಲ ಸೌಲಭ್ಯಗಳನ್ನು ಒದಗಿಸುವಂತಹ ಕಾಮಗಾರಿಗಳನ್ನು ಪ್ರಸ್ತಾಪಿಸುವುದು.
2. ಪ್ರಸ್ತಾಪಿಸುವ ಕಾಮಗಾರಿಗಳು ಜಿಲ್ಲೆಗೆ ವಿಶಿಷ್ಟವಾದ (District Specific) ಕಾಮಗಾರಿಗಳಾಗಿರಬೇಕು.
3. ಕಾಮಗಾರಿಗಳನ್ನು ಆಯ್ಕೆ ಮಾಡುವಾಗ ಅವುಗಳ ಅವಶ್ಯಕತೆ ಹಾಗೂ ಆಧ್ಯತೆಯ ಮೇಲೆ ಆಯ್ಕೆ ಮಾಡುವುದು.
4. ಪ್ರಸ್ತಾಪಿಸುವ ಕಾಮಗಾರಿಗಳು ಹಣಕಾಸು ವರ್ಷದಲ್ಲೇ ಪೂರ್ಣಗೊಳಿಸಬಹುದಾದಂತಹ ಕಾಮಗಾರಿಗಳನ್ನು ಆಯ್ಕೆಮಾಡಿಕೊಂಡು ಅನುಷ್ಠಾನಗೊಳಿಸುವುದು.
5. ಪ್ರಸ್ತಾಪಿಸುವ ಕಾಮಗಾರಿಗಳು ಇತರೆ ಯಾವುದೇ ಯೋಜನೆಗಳಡಿ ಅನುಷ್ಠಾನಗೊಳಿಸದಿರುವುದರ ಬಗ್ಗೆ ಖಚಿತಪಡಿಸಿಕೊಳ್ಳುವುದು.
6. ಪ್ರಸ್ತಪಿಸಿದ ಕಾಮಗಾರಿಗಳ ಅಗತ್ಯತೆಯ ಬಗ್ಗೆ ಸಂಬಂಧಪಟ್ಟ ಇಲಾಖೆಯಿಂದ ದೃಢಪಡಿಸಿಕೊಳ್ಳುವುದು.
7. ಕಾರ್ಯಕ್ರಮವನ್ನು ಕಾರ್ಯಾನುಷ್ಠಾನಗೊಳಿಸುವಲ್ಲಿ ಕರ್ನಾಟಕ ಪಾರದರ್ಶಕ ಕಾಯ್ದೆ, 1999 ಮತ್ತು ಇದರ ನಿಯಮಗಳು, 2000ಅನ್ನು ಅನುಸರಿಸುವುದು.
8. ಪ್ರಸ್ತಾಪಿಸುವ ಕಾರ್ಯಕ್ರಮವನ್ನು ನಿಗದಿಪಡಿಸುವ ಅನುದಾನದಿಂದ ಅಪೇಕ್ಷಿತ ಗುಣಮಟ್ಟದಲ್ಲಿ ಅನುಷ್ಠಾನಿಸುವ ಸಾಧ್ಯತೆಯ ಬಗ್ಗೆ ಖಾತ್ರಿಪಡಿಸಿಕೊಳ್ಳತಕ್ಕದ್ದು.

**(ರಫೀ ಅಹಮದ್ ಎಂ.ಎಸ್)**
**ಸರ್ಕಾರದ ಅಧೀನ ಕಾರ್ಯದರ್ಶಿ 1 ಮತ್ತು 2,**
**ಯೋಜನೆ, ಕಾರ್ಯಕ್ರಮ ಸಂಯೋಜನೆ**
**ಮತ್ತು ಸಾಂಖ್ಯಿಕ ಇಲಾಖೆ**

**ಇವರಿಗೆ,**

1. **ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ-ಪ್ರಕಟಣೆಗಾಗಿ.**
2. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು./ಕಂಪೆಂಡಿಯಂಗೋಸ್ಕರ

**<u>ಪ್ರತಿಯನ್ನು:</u>**

1. ಮಾನ್ಯ ಯೋಜನೆ ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಆಪ್ತ ಕಾರ್ಯದರ್ಶಿ ಇವರ ಮಾಹಿತಿಗಾಗಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯೋಜನಾ ಇಲಾಖೆ ಇವರ ಮಾಹಿತಿಗಾಗಿ.
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯೋಜನಾ ಇಲಾಖೆ ಇವರ ಮಾಹಿತಿಗಾಗಿ